**<u>ದಿನಾಂಕಃ29.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ ಜಿ ಎನ್ ಆರ್ ವಕೀಲರಿಂದಃ</u>**

ಉಪ ನೊಂದಾಣಾಧಿಕಾರಿ ಕಚೇರಿಯಲ್ಲಿ ವಾದಿಗೆ ಮಾಡಿಕೊಟ್ಟ ದಾಖಲಾತಿಯ ಪ್ರತಿಯನ್ನು ಪಡೆದುಕೊಂಡಿರುತ್ತೀರಿಯೇ ಎಂದರೆ ನನ್ನ ತಂದೆ ಪಡೆದುಕೊಂಡಿರಬಹುದು ಎಂದು ಹೇಳುತ್ತಾರೆ. ದಾಖಲಾತಿಯನ್ನು ಬರೆಸುವಾಗ ನಾವು ಪ್ರತಿವಾದಿಗಳು ಹಾಜರಿದ್ದೆವು. ನಮ್ಮ ಮುಂದೆಯೇ ತೀರ್ಥಕುಮಾರ್ ರವರು ದಾಖಲಾತಿಗಳನ್ನು ಟೈಪ್ ಮಾಡಿರುತ್ತಾರೆ. ಆದ್ದರಿಂದ ದಾಖಲಾತಿಯಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ನಿಮಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರು ದಾಖಲಾತಿಯನ್ನು ಟೈಪ್ ಮಾಡಿ ರೆಡಿ ಮಾಡಿ ಇಟ್ಟಿರುತ್ತೇವೆ ಆಗ ಬಂದು ಸಹಿ ಮಾಡಿ ಎಂದು ಹೇಳಿರುತ್ತಾರೆ ಎಂದು ಹೇಳುತ್ತಾರೆ. ನಾನು ಸಹಿಯನ್ನು ಮಾಡುವ ಮುಂಚೆ ಪ್ರತಿವಾದಿಗಳು ಯಾರೂ ಓದಿರುವುದಿಲ್ಲ. ಆ ದಾಖಲಾತಿ ನಂಬಿಕೆ ಪತ್ರ ಎಂದು ಹೇಳಿರುತ್ತಾರೆ. 5 ಲಕ್ಷ ಹಣ ನನ್ನ ತಂದೆಯ ಖಾತೆಗೆ ಚೆಕ್ ಮುಖೇಕನ ಪಾವತಿ ಮಾಡಿರುತ್ತಾರೆ ಎಂದರೆ ಸರಿ. ಆ ಹಣವನ್ನು ನನ್ನ ತಂದೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಾನು ಈ ಮೊದಲೇ ಹೇಳಿದಂತಹ ದಾಖಲಾತಿ ಕ್ರಯದ ಕರಾರು ಪತ್ರ ಆಗಿದ್ದು ನಂಬಿಕೆ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಾವು 7 ವರೆ ಲಕ್ಷ ರೂಪಾಯಿ ಹಣವನ್ನು ಶೇ. 2 ರಷ್ಟು ಬಡ್ಡಿಗೆ ಪಡೆದುಕೊಂಡಿರುತ್ತೇವೆ. ಒಂದು ವರ್ಷಗಳ ಕಾಲ ಬಡ್ಡಿ ಹಣವನ್ನು ಕೊಟ್ಟಿರುತ್ತೇವೆ. ನಾವು ನಗದಾಗಿ ಹಣವನ್ನು ಕೊಟ್ಟಿರುತ್ತೇವೆ. ಅದರ ಬಗ್ಗೆ ದಾಖಲಾತಿ ಇರುವುದಿಲ್ಲ ಯಾರೂ ಸಾಕ್ಷಿದಾರರ ಸಮಕ್ಷಮ ನೀಡಿರುವುದಿಲ್ಲ ಕೇವಲ ನಂಬಿಕೆ ಆಧಾರದ ಮೇಲೆ ವ್ಯವಹಾರ

ಮಾಡಿರುತ್ತೇವೆ. ನಾವು ವಾದಿಗೆ ಹಣವನ್ನು ಕೊಡುತ್ತೇವೆ ನಂಬಿಕೆ ಪತ್ರವನ್ನು ರದ್ದು ಮಾಡಿ ಎಂದು ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ನಾನು ಹೇಳಿದ ಹಾಗೆ ನಂಬಿಕೆ ಪತ್ರ ಮಾಡಿದ್ದಾದಲ್ಲಿ ಅದನ್ನು ರದ್ದುಪಡಿಸಲು ನಾನಾಗಲೀ ಉಳಿದ ಪ್ರತಿವಾದಿಗಳಾಗಲೀ ನೋಟಿಸ್ ನೀಡುತ್ತಿದ್ದೆವು ಎಂದರೆ ಸರಿಯಲ್ಲ. ದಿಃ 31.12.2019 ರಂದು ಕ್ರಯದ ಕರಾರು ಪತ್ರ ಮಾಡಿದ್ದು, ಅದರಲ್ಲಿ ಹೇಳಿದ ಷರತ್ತಿನ ಹಾಗೆ ನಾವು ಪ್ರತಿವಾದಿಗಳು ಪಾಲನೆ ಮಾಡದೇ ಇದ್ದ ಕಾರಣ ವಾದಿಯು ವಕೀಲರ ಮುಕೇನ ತಿಳುವಳಿಕೆ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಕಾನೂನಿನ ಪ್ರಕಾರ ತಿಳುವಳಿಕೆ ಪತ್ರ ಕೊಟ್ಟ ನಂತರ ನಾವು ಸುಳ್ಳು ಉತ್ತರವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

ನಾವು ಮತ್ತು 3 ನೇ ಪ್ರತಿವಾದಿ ಎಲ್ಲ ಒಟ್ಟಿಗೆ ಇದ್ದೇವೆ ಎಂದ ರೆ ಸರಿಯಲ್ಲ ವಿಭಾಗ ಆಗಿರುತ್ತೇವೆ. ವಿಭಾಗ ಆಗಿ 2 ವರ್ಷ ಆಗಿರುತ್ತದೆ ಅದರ ಬಗ್ಗೆ ದಾಖಲಾತಿ ಮಾಡಿಕೊಂಡಿರುವುದಿಲ್ಲ. ಹರೀಶ ದುಷ್ಟಚಟಗಳಿಗೆ ಬಲಿ ಆಗಿದ್ದರು ಅವರು ವಾದಿಯ ಬಳಿ ಸಾಲವನ್ನು ಮಾಡಿರುತ್ತಾರೆ. ಅವರು 2015 ರಲ್ಲಿ 7 ಲಕ್ಷ ಸಾಲವನ್ನು ಮಾಡಿರುತ್ತಾರೆ. ಹಣವನ್ನು ಪಡೆದುಕೊಂಡ ಬಗ್ಗೆ ಯಾವುದೇ ದಾಖಲಾತಿ ಮಾಡಿರುವುದಿಲ್ಲ ಆದರೆ ನಂಬಿಕೆ ಪತ್ರ ಮಾಡಿದ್ದಾಗಿರುತ್ತದೆ. ನಾನು ನನ್ನ ತಂದೆ 3 ನೇ ಪ್ರತಿವಾದಿ ವಿರುದ್ಧ ದುಷ್ಟಚಟಗಳಿಗೆ ಬಲಿ ಆಗಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ವಾದಿಯು ಲೇವಾದೇವಿ ವ್ಯವಹಾರ ಮಾಡುತ್ತಿದ್ದರು ಎಂದು ಹೇಳಿದ್ದು ಅದರ ಬಗ್ಗೆ ದಾಖಲಾತಿ ಇರುವುದಿಲ್ಲ ಆದರೆ ಸಾಕ್ಷಿದಾರರು ಇರುತ್ತಾರೆ. ಒಟ್ಟು ಕುಟುಂಬದ ಅವಶ್ಯಕತೆಗೊಸ್ಕರ ದಾವಾ ಸ್ವತ್ತನ್ನು ಕ್ರಯಕ್ಕೆ ಕೊಡಲು ಒಪ್ಪಿದ್ದು ಕ್ರಯ ನಿರ್ಷ್ಕರ್ಶೆ 8 ಲಕ್ಷ ರೂಗಳಿಗೆ ಆಗಿದ್ದು ಅದರಲ್ಲಿ 7 ವರೆ ಲಕ್ಷ ವನ್ನು ಪಡೆದುಕೊಂಡಿದ್ದು ಉಳಿದ ಹಣವನ್ನು

ಕ್ರಯ ಪತ್ರ ಮಾಡುವ ಸಮಯದಲ್ಲಿ ಪಡೆದುಕೊಳ್ಳುತ್ತೇವೆ ಎಂದು ಹೇಳಿ ಕರಾರು ಪತ್ರ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಮೊಸ ಮಾಡುವ ಉದ್ದೇಶದಿಂದ ನಾನು ನನ್ನ ತಂದೆ ಶರೀಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇವೆ ಎಂದ ರೆ ಸರಿಯಲ್ಲ. 04.05.2019 ರಲ್ಲಿ ದಯಾನಂದ್ ಎಂಬುವವರಿಗೆ ದಾವಾ ಸ್ವತ್ತಿನ ಬಗ್ಗೆ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಆ ಕರಾರು ಪತ್ರವನ್ನು ನಂಬಿಕೆ ಪತ್ರ ಮಾಡಿದ ದಿನದಂದೆ ಮಾಡಿದ್ದಾಗಿರುತ್ತದೆ ಹಣವನ್ನು ಕೊಡುವ ಸಲುವಾಗಿ ಮಾಡಿದ್ದಾಗಿರುತ್ತದೆ. 30.12.2019 ರಂದು ಆ ಕರಾರು ಪತ್ರದ ರದ್ದತಿ ಪತ್ರ ಬರೆದುಕೊಟ್ಟಿರುತ್ತೇವೆ ತದ ನಂತರದಲ್ಲಿ 31.12.2019 ರಂದು ವಾದಿಗೆ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈರಾಚಾರ್ ಬಿನ್ ಮಲ್ಲಾಚಾರ್ ಎಂದರೆ ನನ್ನ ತಂದೆ. ಸರ್ವೆ ನಂಬರ್: 8/4 ರಲ್ಲಿ 16 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಈ ಕೇಸು ಹಾಕಿದ ನಂತರ ದಿಃ 27.12.2021 ರಂದು ವರಲಕ್ಷ್ಮಿ ಎನ್ನುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಅದನ್ನು 8 ಲಕ್ಷಕ್ಕೆ ಮಾರಾಟ ಮಾಡಿರುತ್ತೇವೆ. ನಾನು ಕುಟುಂಬಕ್ಕೋಸ್ಕರ ಆಸ್ತಿಯನ್ನು ಮಾರಾಟ ಮಾಡಲು ಕರಾರು ಪತ್ರ ಮಾಡಿಕೊಟ್ಟಿದ್ದು ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರಿಂದ 19 ಸೃಷ್ಟಿ ಮಾಡಿದಂತಹ ದಾಖಲಾತಿಗಳು ಎಂದರೆ ಸರಿಯಲ್ಲ. ಈ ಕೇಸು ದಾಖಲಾದ ಮೇಲೆ ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಾನು ಸುಳ್ಳು ಪ್ರಮಾಣ ಪತರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾವರು ಪತ್ರದ ಮೇರೆಗೆ ಕ್ರಯ ಪತ್ರ ಮಾಡಿಕೊಡಿ ಎಂದು ಹೇಳಿದ್ದು ಸುಳ್ಳು ಸಬೂಬು ಹೇಳಿ ಮುಂದೂಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ಸಬೂಬು ಹೇಳಿದ್ದರಿಂದ ಕಾನೂನು

ರೀತಿಯಲ್ಲಿ ತಿಳುವಳಿಕೆ ಪತ್ರ ನೀಡಿದ್ದು ನಂತರದಲ್ಲಿ ಈ ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಕರಾರು ಪತ್ರ ಆಗಿದ್ದು ಗೊತ್ತಿದ್ದಾಗ್ಯೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ